ಕ್ರಸಂ	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಜಾತಿ : ಉಪಜಾತಿ	ಕೊಳವೆ ಬಾವಿ ಕೊರೆದ ದಿನಾಂಕ	ಕೊಳವೆ ಬಾವಿಯ ಆಳ (ಮೀ.ಗಳಲ್ಲಿ)
29	ಗಾದಿರಪ್ಪ ಬಿನ್ ಹನುಮಪ್ಪ ಕುರುಡಿ	ನಾಯಕ	28.03.06	96.03
30	ಹಾಲಪ್ಪ ಬಿನ್ ರಂಗಪ್ಪ ಕರಿಯಾಗಳಹಳ್ಳಿ	ನಾಯಕ	28.03.06	83.84
31	ನಲ್ಲಮ್ಮ ಕೋಂ ತಿಪ್ಪಣ್ಣ ಹೊನ್ನಾಯ್ಕನಹಳ್ಳಿ	ನಾಯಕ	27.06.06	97.56
32	ಕಂಚಪ್ಪ ಬಿನ್ ಹನುಮಂತಪ್ಪ ತುಂಬಿಗರೆ	ನಾಯಕ	22.06.06	91.46
33	ಫಕೀರಮ್ಮ ಕೋಂ ಕಂಚಪ್ಪ ತುಂಬಿಗರೆ	ನಾಯಕ	23.06.06	92.98

76 (188) ಶ್ರೀ ಧ್ರುವನಾರಾಯಣ.ಆರ್ (ಸಂತೇಮರಳ್ಳಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಸಂಬಂಧದ ಸಂಪುಟದ ಉಪಸಮಿತಿ ನಿಯಮಾನುಸಾರ ಕನಿಷ್ಠ ಎಷ್ಟು ದಿನಗಳಿಗೊಮ್ಮೆ ಸಭೆ ಸೇರಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಪ್ರಗತಿ ಪರಿಶೀಲನೆ ನಡೆಸಬಹುದಾಗಿದೆ;

ಆ) ಸಮಿತಿಯು ಸೆಪ್ಟೆಂಬರ್‌ನಿಂದ ಡಿಸೆಂಬರ್–2006 ತಿಂಗಳುಗಳಲ್ಲಿ ಎಷ್ಟು ಸಭೆಗಳನ್ನು ನಡೆಸಿದೆ;

ಇ) ಈ ಸಭೆಗಳಲ್ಲಿ ಎಷ್ಟು ಇಲಾಖೆಗಳ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಲಾಗಿದೆ;

ಈ) ಕಾಲ ಕಾಲಕ್ಕೆ ಸಭೆಗಳು ನಡೆಯದಿರುವುದು ನಿಜವಲ್ಲವೇ;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಬ್ಯಾಕ್‌ಲಾಗ್ ಹುದ್ದೆಗಳ ಬಗೆಗಿನ ಸಚಿವ ಸಂಪುಟ ಉಪಸಮಿತಿಯು ನಿರ್ದಿಷ್ಟ ಅವಧಿಯಲ್ಲಿ ಗರಿಷ್ಠ ಅಥವಾ ಕನಿಷ್ಠ ಎಷ್ಟು ದಿನಗಳಿಗೊಮ್ಮೆ ಸಭೆ ಸೇರಬೇಕೆಂಬ ನಿಯಮ ಇರುವುದಿಲ್ಲ. ಅಗತ್ಯತೆಗನುಗುಣವಾಗಿ ಸಭೆ ಸೇರುವುದು.

ಆ) ಸಮಿತಿಯು ಸೆಪ್ಟೆಂಬರ್–06 ರಿಂದ ಡಿಸೆಂಬರ್–2006ರವರೆಗೆ ಒಂದು ಬಾರಿ ಸಭೆ ಸೇರಿದೆ.

ಇ) ಈ ಸಭೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸದೇ ಇರುವ ಎಲ್ಲಾ ಇಲಾಖೆಗಳ ಪ್ರಗತಿ ಬಗ್ಗೆ ಪರಿಶೀಲನೆ ನಡೆಸಲಾಗಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

67 (183) ಶ್ರೀ ಬಾಲರಾಜ್.ಎಸ್. (ಕೊಳ್ಳೇಗಾಲ) :– ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳಿಗೆ ಎಷ್ಟೆಷ್ಟು ಹಣ ಮಂಜೂರಾಗಿವೆ. (ಯೋಜನೆವಾರು ಪೂರ್ಣ ಮಾಹಿತಿ ನೀಡುವುದು);

ಆ) ಇಲಾಖೆಯಿಂದ ತೆಗೆದುಕೊಂಡ ಕಾಮಗಾರಿಗಳ ಪ್ರಗತಿಯೇನು;

ಇ) ಈ ಯೋಜನೆಯಿಂದ ಕ್ಷೇತ್ರಕ್ಕಾಗುವ ಪ್ರಯೋಜನ ಏನು ಹಾಗೂ ಪ್ರಯೋಜನ ಪಡೆದ ಫಲಾನುಭವಿಗಳು ಯಾರ್ಯಾರು (ಪೂರ್ಣ ವಿವರ ನೀಡುವುದು);

ಈ) ಕ್ಷೇತ್ರವಾರು ಯಾವ ಯಾವ ಉದ್ದೇಶಗಳಿಗೆ ಇಲಾಖೆ ಕಾರ್ಯಕ್ರಮ ಕೈಗೊಳ್ಳುತ್ತಿದೆ;

ಉ) ಕೊಳ್ಳೇಗಾಲ ಕ್ಷೇತ್ರದ ಯೋಜನೆ ಬಿಡುಗಡೆಗೊಳಿಸಿರುವ ಹಣ ಎಷ್ಟು; (ಪೂರ್ಣ ವಿವರ ನೀಡುವುದು)?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ನಿಗಮದಿಂದ ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಹಾಗೂ ಸಾಧನೆ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.